ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಅಭಿಯಂತರರ ಕಛೇರಿ
ರಸ್ತೆ ಮೂಲಭೂತ ಸೌಕರ್ಯ
ಎನ್.ಆರ್.ಚೌಕ, ಬೆಂಗಳೂರು–02
ದಿನಾಂಕ:10.10.2019.

ತಾಂತ್ರಿಕ ಮಂಜೂರಾತಿ

ವಿಷಯ:–"Repairs and Improvements to drains Mandi Mariyappa Reddy main road in Mariyannapalya inward No.07 Byatarayanapura" ಕಾಮಗಾರಿಯ ಅಂದಾಜು ಪಟ್ಟಿಗೆ ತಾಂತ್ರಿಕ ಮಂಜೂರಾತಿ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ:–1.ಮಾನ್ಯ ಆಯುಕ್ತರವರ ಅಧಿಕಾರ ಪ್ರತ್ಯಾಯೋಜನೆ ಆದೇಶ ಸಂಖ್ಯೆ:ಬಿ12(1)/ಪಿಆರ್/394/ 2018–19. ದಿನಾಂಕ:04.10.2018.

2.ದಿನಾಂಕ:07.09.2019ರಂದು ನಡೆದ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಸಭೆಯ ವಿಷಯ ಸಂಖ್ಯೆ:ಬೃ.ಸಾ.ಕಾ.ಸ್ಥಾ.ಸ:12/2019–20ರ ಅನುಮೋದನೆ.

3.ಮುಖ್ಯ ಅಭಿಯಂತರರು ರವರ ಕಛೇರಿ ಆಡಳಿತಾತ್ಮಕ ಅನುಮೋದನೆ ಸಂಖ್ಯೆ:CE(RI)/ADM/ AS/133/2019-20. ದಿನಾಂಕ:10.10.2019.

****

ಪ್ರಸ್ತಾವನೆ:–

ಕಾರ್ಯಪಾಲಕ ಅಭಿಯಂತರರು(ರಮೂಸೌ–ಯಲಹಂಕ ವಿಭಾಗ) ರವರು ಮೇಲ್ಕಂಡ ರಸ್ತೆ ಮತ್ತು ಚರಂಡಿ ದುರಸ್ಥಿ/ಅಭಿವೃದ್ಧಿ ಕಾಮಗಾರಿಯ ಅಂದಾಜು ಪಟ್ಟಿಯನ್ನು **ರೂ.200.00 ಲಕ್ಷಗಳ(ರೂಪಾಯಿ ಎರಡು ಕೋಟಿಗಳು ಮಾತ್ರ)** ಮೊತ್ತಕ್ಕೆ ತಯಾರಿಸಿದ್ದು, ಲೆಕ್ಕ ಶೀರ್ಷಿಕೆ **ಪಿ–2902(Maintaining of Arterial and Sub-Arterial Roads in Infrastructure Division in all the 8 zones of BBMP Escrow Account)** ಅಡಿಯಲ್ಲಿ ಆಡಳಿತಾತ್ಮಕ ಅನುಮೋದನೆ ಕೋರಿರುವ ಪ್ರಸ್ತಾವನೆಗೆ ಉಲ್ಲೇಖ(2)ರ ದಿನಾಂಕ:07.09.2019 ರಂದು ನಡೆದ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಸಭೆ ವಿಷಯ ಸಂಖ್ಯೆ:ಬೃ.ಸಾ.ಕಾ.ಸ್ಥಾ.ಸ:12 /2019–20ರ ಕ್ರಿಯಾಯೋಜನೆ ಕ್ರಮ ಸಂಖ್ಯೆ:121ರಲ್ಲಿ ಅನುಮೋದನೆ ನೀಡಿರುವ ಮೇರೆಗೆ ಮತ್ತು ಉಲ್ಲೇಖ(1)ರ ಅಧಿಕಾರ ಪ್ರತ್ಯಾಯೋಜನೆಯಂತೆ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿ ಆದೇಶ ಕೋರಿರುತ್ತಾರೆ.

ಮೇಲ್ಕಂಡ ರಸ್ತೆ ಮತ್ತು ಚರಂಡಿ ದುರಸ್ಥಿ/ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ದಿನಾಂಕ:07.09.2019 ರಂದು ನಡೆದ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಸಭೆ ವಿಷಯ ಸಂಖ್ಯೆ:ಬೃ.ಸಾ.ಕಾ.ಸ್ಥಾ.ಸ:12 /2019–20ರ ಕ್ರಿಯಾಯೋಜನೆ ಕ್ರಮ ಸಂಖ್ಯೆ:121ರಲ್ಲಿ ಅನುಮೋದನೆ ನೀಡಿರುವ ಮೇರೆಗೆ ಅಂದಾಜು ಪಟ್ಟಿಗೆ ಉಲ್ಲೇಖ(3) ರಂತೆ ಆಡಳಿತಾತ್ಮಕ ಅನುಮೋದನೆ ಆದೇಶ ಹೊರಡಿಸಿದ್ದು, ತಾಂತ್ರಿಕ ಮಂಜೂರಾತಿ ಆದೇಶ ನೀಡಬೇಕಾಗಿರುತ್ತದೆ.

ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, **"Repairs and Improvements to drains Mandi Mariyappa Reddy main road in Mariyannapalya inward No.07 Byatarayanapura"** ಕಾಮಗಾರಿಯ ಅಂದಾಜು ಪಟ್ಟಿಯನ್ನು ರೂ.**200.00 ಲಕ್ಷಗಳ(ರೂಪಾಯಿ ಎರಡು ಕೋಟಿಗಳು ಮಾತ್ರ)** ಮೊತ್ತಕ್ಕೆ ತಯಾರಿಸಿ ಸಲ್ಲಿಸಿದ್ದು, ದಿನಾಂಕ:07.09.2019ರಂದು ನಡೆದ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಸಭೆಯ ವಿಷಯ ಸಂಖ್ಯೆ:ಬೃ.ಸಾ.ಕಾ.ಸ್ಥಾ.ಸ:12/2019–20ರ ಕ್ರಿಯಾಯೋಜನೆ ಕ್ರಮ ಸಂಖ್ಯೆ:121ರಲ್ಲಿ ಅನುಮೋದನೆ ಮತ್ತು ಉಲ್ಲೇಖ(1)ರ ಅಧಿಕಾರ ಪ್ರತ್ಯಾಯೋಜನೆಯಂತೆ ಅಂದಾಜು ಪಟ್ಟಿಗೆ ಕೆಳಕಂಡ ತಾಂತ್ರಿಕ ನಿಬಂಧನೆಗಳಿಗೆ ಒಳಪಟ್ಟು ತಾಂತ್ರಿಕ ಮಂಜೂರಾತಿ ಆದೇಶ ನೀಡಲಾಗಿದೆ.

ಈ ತಾಂತ್ರಿಕ ಮಂಜೂರಾತಿಯನ್ನು ಮುಖ್ಯ ಅಭಿಯಂತರರವರ ದಾಖಲುಪಟ್ಟಿ ಸಂಖ್ಯೆ:**CE(RI)/TS /91/2019-20.** ದಿನಾಂಕ:**10.10.2019**ರಲ್ಲಿ ದಾಖಲಿಸಲಾಗಿದೆ.

ತಾಂತ್ರಿಕ ನಿಬಂಧನೆಗಳು :

1. ಅಂದಾಜು ಪಟ್ಟಿಯಲ್ಲಿ ಮೀಸಲಿರಿಸಿರುವ ಇಡಿಗಂಟು (Lumpsum) ರೂಪದಲ್ಲಿ ಒದಗಿಸಲಾದ ಮೊತ್ತಗಳಿಗೆ ವಿವರವಾದ ಉಪ ಅಂದಾಜು ಪಟ್ಟಿಗಳನ್ನು ಸಿದ್ಧಪಡಿಸಿ ಕೆಲಸ ಆರಂಭಿಸುವ ಮುನ್ನ ಸಕ್ಷಮ ಅಧಿಕಾರಿಗಳಿಂದ ಅನುಮೋದನೆ ಪಡೆಯತಕ್ಕದ್ದು.
2. ರಸ್ತೆ ಕಾಮಗಾರಿಗೆ ಸಂಬಂಧಪಟ್ಟಂತೆ ರಸ್ತೆ ಇತಿಹಾಸ(Road History) ವಹಿಯಲ್ಲಿ ದಾಖಲಿಸತಕ್ಕದ್ದು
3. ಕಾಮಗಾರಿಗೆ ಮಂಜೂರಾದ ಮೊತ್ತದ ಹಣವನ್ನು ಅದೇ ಕಾಮಗಾರಿಗೆ ಉಪಯೋಗಿಸತಕ್ಕದ್ದು.
4. ಕಾಮಗಾರಿಯನ್ನು ಮೌಲ್ಯ ಪ್ರಮಾಣ ವಿವರಣೆಯ (Standard Specification) ಪ್ರಕಾರ ನಿರ್ವಹಿಸತಕ್ಕದ್ದು.
5. ಕಾಮಗಾರಿಗೆ ಅವಶ್ಯವಿರುವ Structural Design and Drawings ಸಿದ್ಧಪಡಿಸಿ ಕೆಲಸ ಆರಂಭಿಸುವ ಮುನ್ನ ಸಕ್ಷಮ ಅಧಿಕಾರಿಗಳಿಂದ ಅನುಮೋದನೆ ಪಡೆಯತಕ್ಕದ್ದು.
6. ಕಾಮಗಾರಿಯಲ್ಲಿ ಬಿಡುಗಡೆಗೊಳ್ಳುವ ಉಪಯುಕ್ತ ಸಾಮಗ್ರಿಗಳನ್ನು ಎಂಎಎಸ್ ಲೆಕ್ಕಕ್ಕೆ ಪಡೆದು ದಾಖಲೆ ನಿರ್ವಹಿಸತಕ್ಕದ್ದು.

ಮುಖ್ಯ ಅಭಿಯಂತರರು (ರಮೂಸೌ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:–

1. ಪ್ರಧಾನ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಅವಗಾಹನೆಗೆ ತರಲು ತಾಂತ್ರಿಕ ಸಹಾಯಕರು ರವರಿಗೆ ಸೂಕ್ತ ಕ್ರಮಕ್ಕಾಗಿ.
2. ಅಧೀಕ್ಷಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ ರವರಿಗೆ ಸೂಕ್ತ ಕ್ರಮಕ್ಕಾಗಿ.
3. ಕಾ.ಪಾ.ಅ(ರಮೂಸೌ–ಯಲಹಂಕ ವಿಭಾಗ) ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
4. ಕಛೇರಿ ಕಡತಕ್ಕೆ.